ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 04–07–2015

## ಪತ್ರಿಕಾ ಪ್ರಕಟಣೆ

## ಡಾ: ಬಾಬು ಜಗಜೀವನ್‌ರಾಂ ಪುಣ್ಯ ಸ್ಮರಣೆ

ಬೆಂಗಳೂರು, ಜುಲೈ 6 (ಕರ್ನಾಟಕ ವಾರ್ತೆ)

ಭಾರತದ ಮಾಜಿ ಉಪ ಪ್ರಧಾನಿ ಡಾ: ಬಾಬು ಜಗಜೀವನರಾಂ ಅವರ ಪುಣ್ಯ ಸ್ಮರಣೆ ಅಂಗವಾಗಿ ಇಂದು ಬೆಳಿಗ್ಗೆ ಬೆಂಗಳೂರು ವಿಧಾನ ಸೌಧದ ಪಶ್ಚಿಮ ಧ್ವಾರದ ಬಳಿ ಇರುವ ಡಾ: ಬಾಬು ಜಗಜೀವನರಾಂ ಅವರ ಪ್ರತಿಮೆಗೆ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾಲಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು ಡಾ: ಬಾಬು ಜಗಜೀವನರಾಂ ಅವರ ಆದರ್ಶಗಳನ್ನು ಪಾಲಿಸುವ ಮೂಲಕ ಅವರಿಗೆ ಗೌರವ ಅರ್ಪಿಸೋಣ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಖಾತೆ ಸಚಿವ ಹೆಚ್. ಆಂಜನೇಯ, ಸಹಕಾರ ಸಚಿವ ಹೆಚ್.ಎಸ್. ಮಹದೇವಪ್ರಸಾದ್, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಚಂದ್ರಪ್ಪ ಹಾಗೂ ಇನ್ನಿತರ ಗಣ್ಯರು ಹಾಜರಿದ್ದರು.

ಬಾಬು/ಕೆಎಂ

## ಗೃಹಿಣಿಯ ಕೈಯಲ್ಲಿ ಅರಳಿದ ಚಿತ್ರಕಲೆ

ಬೆಂಗಳೂರು, ಜುಲೈ 6 (ಕರ್ನಾಟಕ ವಾರ್ತೆ)

ಗೃಹಿಣಿಯಾದ ರೂಪಾ ಠಕ್ಕರ್ ಅವರ ಕೈಯಲ್ಲಿ ಅರಳಿರುವ ಕಲಾಕೃತಿಗಳ ಪ್ರದರ್ಶನವನ್ನು ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷರಾದ ಡಾ: ಬಿ. ಎಲ್. ಶಂಕರ್ ಅವರು ಇಂದು ಚಿತ್ರಕಲಾ ಪರಿಷತ್ತಿನಲ್ಲಿ ಉದ್ಘಾಟಿಸಿದರು.

ದಿವಂಗತ ಕಾದಂಬರಿಗಾರ್ತಿಯಾದ ಗೀತಾಕುಲಕರ್ಣಿ ಹಾಗೂ ಕವಿಯಾಗಿದ್ದ ಶೇಷಗಿರಿರಾವ್ ಕುಲಕರ್ಣಿ ಪುತ್ರಿಯಾದ ರೂಪಾ ಅವರು ಧಾರವಾಡದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದ ಬಳಿಕ ಹುಬ್ಬಳ್ಳಿಯ ಠಕ್ಕರ್ ಮನೆತನದ ಉದ್ಯಮಿಯಾದ ಮಧುಕರ್ ಅವರನ್ನು ವಿವಾಹವಾದರು. ಕಲಾವಿದರಾದ ದಿವಂಗತ ಕೆ. ಟಿ. ಆಳ್ವ

ಇವರ ತಾತಾ, ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ದಿವಂಗತ ಶಿವರಾಮಕಾರಂತರು ಇವರ ದೊಡ್ಡಪ್ಪ, ಮತ್ತು ಮಾವ ಅನಿಲ್ ಖ್ಯಾತ ರಂಗಕರ್ಮಿ. ಇಂತಹ ಖ್ಯಾತ ಸಾಹಿತಿಗಳು ಮತ್ತು ಕಲಾವಿದರ ಒಡನಾಟದಲ್ಲಿ ಬೆಳದ ಕುಡಿ ರೂಪಾ.

ಗೃಹಿಣಿಯಾಗಿರುವ ರೂಪಾ ಅವರು ತಮಗೆ ಸಹಜವಾಗಿ ಒಲಿದು ಬಂದ ಈ ಕಲೆಯನ್ನು ಯಾವುದೇ ರೀತಿಯ ತರಬೇತಿಯನ್ನು ಪಡೆಯದೆ ತಮ್ಮದೇ ಆದ ಶೈಲಿಯಲ್ಲಿ ತೈಲವರ್ಣ, ಆಕ್ರಿಲಿಕ್ ಮತ್ತು ಮಿಶ್ರ ಮಾಧ್ಯಮಗಳ ಮೂಲಕ ಕಲಾಕೃತಿಗಳನ್ನು ತಯಾರಿಸುತ್ತಾ ಬಂದಿದ್ದಾರೆ.

ಇವರ ಕಲಾಭಿರುಚಿಯನ್ನು ಗುರುತಿಸಿದ ಪತಿ ಹಾಗೂ ಅತ್ತೆ ಮಾವಂದಿರು ಪ್ರೋತ್ಸಾಹಿಸಿದರು. ಅದರ ಪರಿಣಾಮವಾಗಿ ಎರಡು ಮಕ್ಕಳ ಲಾಲನೆ ಪಾಲನೆಯನ್ನು ಮಾಡುತ್ತಲೆ ತಮ್ಮ ಹವ್ಯಾಸವನ್ನು ಮುಂದುವರಿಸಿಕೊಂಡು ಬಂದಿರುವ ರೂಪಾರವರು ಈ ವಯಸ್ಸಿನಲ್ಲೂ ಕಲಾವಿದರಾಗಿ ತಮ್ಮನ್ನು ತೊಡಗಿಸಿಕೊಂಡು ಹುಬ್ಬಳ್ಳಿಯಲ್ಲಿ ನೆಲೆಸಿದ್ದಾರೆ.

ಅವರು ಬಿಡಿಸಿರುವ ಚಿತ್ರಗಳು ಭಾರತದಲ್ಲಷ್ಟೇ ಅಲ್ಲದೆ ಹೊರ ದೇಶಗಳ ಮನೆ ಮನೆಗಳಲ್ಲಿ ಕಲಾಕೃತಿಗಳಾಗಿ ಅಲಂಕರಿಸಿವೆ. ಬಣ್ಣಗಳು ಮನಸ್ಸಿಗೆ ಉಲ್ಲಾಸವನ್ನು ನೀಡುವುದರಿಂದ ಬಣ್ಣಗಳಿಂದ ನಮ್ಮ ಭಾವನೆಗಳನ್ನು ಹೊರ ಹಾಕಬಹುದು. ಆದ್ದರಿಂದ ಚಿತ್ರಕಲೆಯ ಹವ್ಯಾಸವನ್ನು ಮುಂದುವರೆಸಿಕೊಂಡು ಹೋಗುತ್ತಿರುವುದಾಗಿ ರೂಪಾ ಅವರು ಅಭಿಪ್ರಾಯಪಡುತ್ತಾರೆ.

ಇವರ ಕಲಾಕೃತಿಗಳ ಪ್ರದರ್ಶನವನ್ನು ಸಾರ್ವಜನಿಕರು ಜುಲೈ 12 ರವರೆಗೆ ಬೆಳಿಗ್ಗೆ 10–00 ಗಂಟೆಗೆಯಿಂದ ರಾತ್ರಿ 7–30 ರವರೆಗೆ ಚಿತ್ರಕಲಾ ಪರಿಷತ್ತಿನಲ್ಲಿ ವೀಕ್ಷಿಸಬಹುದಾಗಿದೆ.

ಛಾಯಾಚಿತ್ರ ಇದರೊಂದಿಗೆ ಲಗತ್ತಿಸಿದೆ

ಬಾಬು/ಪೂರ್ಣಿಮ/ಕೆಎಂ ]

# ಅಧಿಕಾರ ಸ್ವೀಕಾರ

ಬೆಂಗಳೂರು, ಜುಲೈ 6 (ಕರ್ನಾಟಕ ವಾರ್ತೆ)

ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆಯ ಶಾಸನ ಸಂಸ್ಥೆಯಾದ ಇ.ಎಸ್.ಐ.ನಿಗಮ, ಕರ್ನಾಟಕ ರಾಜ್ಯದ ನೂತನ ಪ್ರಾದೇಶಿಕ ನಿರ್ದೇಶಕರಾಗಿ ಜೆ. ಎಚ್. ನಾಯಕ್ ರವರು ಅಧಿಕಾರವಹಿಸಿಕೊಂಡಿದ್ದಾರೆ. ಇಲಾಖೆಯಲ್ಲಿ ಅಪಾರ ಅನುಭವವುಳ್ಳ ಹಾಗೂ ಕರ್ನಾಟಕದವರೇ ಆದ ಜೆ. ಎಚ್. ನಾಯಕ್ ರವರು ಗುಜರಾತ್, ತಮಿಳುನಾಡು, ದೆಹಲಿ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಈ ಹಿಂದೆ ಕಾರ್ಯನಿರ್ವಹಿಸಿದ್ದಾರೆ. ಕುಂದು ಕೊರತೆಗಳು ಹಾಗೂ ದೂರುಗಳಿದಲ್ಲಿ, ಅವರನ್ನು 080-26740764 / 26742485ದೂರವಾಣಿ ಸಂಖ್ಯೆಯ ಮೂಲಕ ಸಂರ್ಪಕಿಸಬಹುದು. ( ಛಾಯಾಚಿತ್ರ ಲಗತ್ತಿಸಿದೆ )

## NEW ESIC REGIONAL DIRECTOR

**Bangalore, July 6 (Karnataka Information):**

Shri. J. H. Nayak, has taken charge as Regional Director, Employees' State Insurance Corporation, Karnataka Region. The ESI Scheme is administered by ESI Corporation, a statutory body under Ministry of Labour and Employment, Government of India. J. H. Nayak has got vast administrative experience in the Department. He has worked in Gujarat, Tamil Nadu, Delhi and Karnataka States in various capacities. J. H. Nayak is from Karnataka. J. H. Nayak can be contacted for any grievance or complaint regarding the ESI Scheme in Karnataka on the number 080-26740764 / 26742485
babu/km

## ವಾಹನ ಚಾಲನಾ ತರಬೇತಿ

**ಬೆಂಗಳೂರು, ಜುಲೈ 6 (ಕರ್ನಾಟಕ ವಾರ್ತೆ)**

**ಬೆಂಗಳೂರು ಯಲಹಂಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಚೇರಿಯ ವ್ಯಾಪ್ತಿಗೆ ಬರುವ ಎಸ್.ಎಸ್.ಎಲ್.ಸಿ. ಅಥವಾ 8ನೇ ತರಗತಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅರ್ಹ ಅಭ್ಯರ್ಥಿಗಳಿಂದ ಆಟೋರಿಕ್ಷಾ, ಲಘು ಮತ್ತು ಭಾರಿ ಮೋಟಾರು ವಾಹನ ಚಾಲನಾ ತರಬೇತಿಯನ್ನು ನೀಡಲಾಗುವುದು. ಅರ್ಜಿ ಸಲ್ಲಿಸಲು ಜುಲೈ 31 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಯಲಹಂಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಅಥವಾ ದೂರವಾಣಿ 080–28561525 ಸಂಪರ್ಕಿಸಲು ಕೋರಿದೆ.**
**ಬಾಬು/ಕೆಎಂ**